**ದಿನಾಂಕಃ 06.03.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.CMG ರವರಿಂದಃ**

1. ಡಿಸ್ಚಾರ್ಜ್ ಸಮ್ಮರಿ ಹಾಜರುಪಡಿಸಿದ್ದು ಅದನ್ನು ನಿ.ಪಿ.11 ಎಂದು ಗುರುತಿಸಿದೆ.

2. ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಹಾಜರುಪಡಿಸಿದ್ದೇನೆ. ಸದರಿ ದಾಖಲೆಯನ್ನು ನಿ.ಪಿ.12 ಎಂದು ಗುರುತಿಸಿದೆ.

   **ಸೂಚನೆಃ** ನಿ.ಪಿ.12 ದಾಖಲೆಯಲ್ಲಿ ದಿಃ02.02.2023 ರಿಂದ ದಿಃ01.03.2024 ವರೆಗೆ ಮಾಹಿತಿಗಳು ಲಭ್ಯ ಇವೆ.

3. ಆದ ಕಾರಣದಿಂದ ಪ್ರಾರ್ಥನೆಯಂತೆ ನನಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.MK ರವರಿಂದಃ**

1) ಅಪಘಾತದ ಸಂಬಂಧವಾಗಿ ಕ್ಯಾತ್ಸಂದ್ರ ಪೋಲಿಸರಿಗೆ ನಾನು ಫಿರ್ಯಾದನ್ನು ನೀಡಿದ್ದೇನೆ. ದಿಃ 08.03.2024 ರಂದು ನಾನು ಪೋಲಿಸರಿಗೆ ದೂರನ್ನು ನೀಡಿದ್ದೇನೆ.

2) ದಿಃ **02.03.2024** ರಂದು ನನಗೆ ಅಪಘಾತವು ಆಗಿದೆ. ಅಪಘಾತಕ್ಕೆ ಸಂಬಂಧಪಟ್ಟ ಹಾಗೆ **5** ದಿನಗಳು ತಡವಾಗಿ ಪೋಲಿಸರಿಗೆ ದೂರನ್ನು ನೀಡಲಾಗಿದೆ ಎಂದರೆ ಸರಿ. ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ ನನಗೆ ಪ್ರಜ್ಞೆ ಇರಲಿಲ್ಲ. ನನ್ನನ್ನು ಆಸ್ಪತ್ರೆಗೆ ಸೇರಿಸಿದ ನಂತರ ನನ್ನನ್ನು ಸ್ಕ್ಯಾನಿಂಗ್ ಪರೀಕ್ಷೆಗೆ ಕರೆದುಕೊಂಡು ಹೋಗುತ್ತಿರುವಾಗ ನನಗೆ ಪ್ರಜ್ಞೆಯು ಬಂದಿತು.

3) ನನಗೆ ಪ್ರಜ್ಞೆ ಬಂದ ತಕ್ಷಣ ನಾನು ಅಪಘಾತದ ವಿಷಯವನ್ನು ಪೋಲಿಸರಿಗೆ ತಿಳಿಸಿರುವುದಿಲ್ಲ.

4) ಅಪಘಾತದ ಸಮಯದಲ್ಲಿ ನಾನು ಕೆಎ**-06-**ಹೆಚ್ ಜಿ**-6720** ಸಂಖ್ಯೆಯ ದ್ವಿಚಕ್ರ ವಾಹನವನ್ನು ಚಾಲನೆ ಮಾಡುತ್ತಿದ್ದೆನು ಮತ್ತು ಆ ವಾಹನವು ನನ್ನ ಹೆಂಡತಿಯ ಹೆಸರಿನಲ್ಲಿ ಇದೆ.

5) ಅಪಘಾತದ ಸಮಯದಲ್ಲಿ ದೇವರಾಯನದುರ್ಗ ಕಡೆಯಿಂದ ಸತ್ಯಮಂಗಲ ಕಡೆಗೆ ನಾನು ನನ್ನ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆನು. ನನ್ನ ಬಳಿ ಸಮರ್ಪಕವಾದ ಚಾಲನಾ ಪರವಾನಗಿಯು ಇತ್ತು. ನನ್ನ ಚಾಲನಾ ಪರವಾನಗಿಯನ್ನು ಹಾಜರುಪಡಿಸಲು ನನಗೆ ತೊಂದರೆಯು ಇರುವುದಿಲ್ಲ. ಸದರಿ ದ್ವಿಚಕ್ರ ವಾಹನಕ್ಕೆ ವಿಮಾ ಪಾಲಿಸಿಯನ್ನು ಪಡೆದುಕೊಳ್ಳಲಾಗಿತ್ತು,

ಆದರೆ ಯಾವ ವಿಮಾ ಸಂಸ್ಥೆಯಿಂದ ಪಡೆದುಕೊಳ್ಳಲಾಗಿತ್ತು ಎಂದು ಹೇಳಲು ಆಗುವುದಿಲ್ಲ. ನನ್ನ ವಾಹನದ ವಿಮಾ ಪಾಲಿಸಿಯನ್ನು ನಾನು ಹಾಜರುಪಡಿಸಿದ್ದೇನೆ.

6) ದೇವರಾಯನದುರ್ಗ ಕಡೆಯಿಂದ ತುಮಕೂರಿಗೆ ಹೋಗುವ ರಸ್ತೆಯಲ್ಲಿ ಅಪಘಾತವು ಆಗಿದೆ. ಸದರಿ ರಸ್ತೆಯು ಅರಣ್ಯ ಇರುವ ಪ್ರದೇಶದಲ್ಲಿ ಹಾದು ಹೋಗುತ್ತದೆ ಎಂದರೆ ಅದು ಹೆದ್ದಾರಿ ಆಗಿದೆ. ಆ ರಸ್ತೆಯು ಎಷ್ಟು ಅಗಲ ಇದೆ ಎಂದು ಹೇಳಲು ಆಗುವುದಿಲ್ಲ ಆದರೆ ಒಂದರ ಪಕ್ಕದಲ್ಲಿ ಒಂದರ ರೀತಿ ಒಟ್ಟು ಎರಡು ಬಸ್ಸುಗಳು ಏಕಕಾಲದಲ್ಲಿ ಹೋಗುವಷ್ಟು ಅಗಲ ಇದೆ. ಸದರಿ ರಸ್ತೆಯಲ್ಲಿ ಯಾವುದೇ ರಸ್ತೆ ವಿಭಜಕವು ಇರುವುದಿಲ್ಲ.

7) ಅಪಘಾತವನ್ನು ಮಾಡಿದಂತಹ ಕಾರು ನನ್ನ ಎದುರುಗಡೆಯಿಂದ ಬರುತ್ತಿತ್ತು. ನನ್ನ ಎದುರುಗಡೆಯಿಂದ ಬಂದಂತಹ ಕಾರು ನನ್ನ ವಾಹನದ ಬಲಭಾಗಕ್ಕೆ ಡಿಕ್ಕಿ ಹೊಡೆಯಿತು. ನಾನು ಮೊಟ್ಟಮೊದಲಿಗೆ ಆ ಕಾರನ್ನು ಆ ರಸ್ತೆಯಲ್ಲಿ ನೋಡಿದಾಗ ಸದರಿ ಕಾರು ನಾನು ಇರುವ ಸ್ಥಳದಿಂದ ಸುಮಾರು ಅರ್ಧ ಕಿ.ಮೀ. ದೂರದಲ್ಲಿ ಬರುತ್ತಿತ್ತು. ನಾನು ನನ್ನ ದ್ವಿಚಕ್ರ ವಾಹನವನ್ನು ಘಂಟೆಗೆ ಸುಮಾರು **40** ರಿಂದ **50** ಕಿ.ಮೀ. ವೇಗದಲ್ಲಿ ಚಾಲನೆ ಮಾಡುತ್ತಿದ್ದೆನು.

8) ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಎಂದರೆ ಸುಳ್ಳು.

9) ಅಪಘಾತದ ನಂತರ ನನ್ನನ್ನು ವಿನಾಯಕ ನರಸಿಂಗ್ ಹೋಂ ಗೆ ಕರೆದುಕೊಂಡು ಹೋಗಲಾಯಿತು. ಅಪಘಾತವನ್ನು ಮಾಡಿದಂತಹ ಕಾರಿನಲ್ಲಿ ಒಟ್ಟು ಇಬ್ಬರು ಇದ್ದರು ಮತ್ತು ಆ ಇಬ್ಬರ ಪೈಕಿ ಒಬ್ಬ ವ್ಯಕ್ತಿಯು ನನ್ನ ಜೊತೆ ಆಸ್ಪತ್ರೆಗೆ ಬಂದಿದ್ದನು.

10) ನನ್ನನ್ನು ಆಸ್ಪತ್ರೆಯಿಂದ **discharge** ಮಾಡುವ ಸಮಯದಲ್ಲಿ **Discharge Summary** ಅನ್ನು ಕೊಟ್ಟಿದ್ದರು ಮತ್ತು ಅದನ್ನು ನಾನು ಹಾಜರುಪಡಿಸಿದ್ದೇನೆ.

11) ಸದರಿ ಅಪಘಾತದಲ್ಲಿ ನನಗೆ ಕೇವಲ ಸಣ್ಣ ಪುಟ್ಟ ಗಾಯಗಳು ಮಾತ್ರ ಆಗಿದ್ದವು ಮತ್ತು ನನಗೆ ಯಾವುದೇ ಮೂಳೆ ಮುರಿತದ ಗಾಯಗಳು ಆಗಿರಲಿಲ್ಲ ಎಂದರೆ ಸುಳ್ಳು. ನನಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಿದ್ದಾರೆ. ನನ್ನನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡುವ ಸಮಯದಲ್ಲಿಯೇ **Discharge Summary** ಕೊಟ್ಟಿದ್ದರು.

12) **Discharge Summary** ಯಲ್ಲಿ ಕೆಲವು ತಿದ್ದುಪಡಿ ಆಗಿರುವ ಬಗ್ಗೆ ವೈದ್ಯರು ತಮ್ಮ ಸಹಿಮಾಡಿ ಕೊಟ್ಟಿದ್ದಾರೆ. ವಿನಾಯಕ ಆಸ್ಪತ್ರೆಯಲ್ಲಿ ಬಿಟ್ಟರೆ ಬೇರೆ ಯಾವುದೇ ಆಸ್ಪತ್ರೆಯಲ್ಲಿಯು ನಾನು

ಚಿಕಿತ್ಸೆಯನ್ನು ಪಡೆದಿರುವುದಿಲ್ಲ. ನನಗೆ **implants** (ಒಳಜೋಡಣೆ) ಹಾಕಿದ್ದಾರೆ. ಸದರಿ ಒಳಜೋಡಣೆಯನ್ನು ತೆಗೆಯಲು ಮತ್ತೊಂದು ಶಸ್ತ್ರ ಚಿಕಿತ್ಸೆಯ ಅಗತ್ಯ ಇದೆ ಮತ್ತು ಅದಕ್ಕೆ ಎಷ್ಟು ಹಣ ಖರ್ಚು ಆಗುತ್ತದೆ ಎಂಬ ಬಗ್ಗೆ ಬರವಣಿಗೆಯಲ್ಲಿ ಯಾವುದೇ ದಾಖಲೆಯನ್ನು ವೈದ್ಯರು ಕೊಟ್ಟಿರುವುದಿಲ್ಲ.

13) ನಾನು ಹಾಜರುಪಡಿಸಿರುವಂತಹ ಮೆಡಿಕಲ್ ಬಿಲ್ಲುಗಳಿಗೆ ಪೂರಕವಾದಂತಹ ಮೆಡಿಕಲ್ **Prescriptions** ಗಳನ್ನು ನಾನು ಹಾಜರುಪಡಿಸಿರುವುದಿಲ್ಲ.

14) ಅಪಘಾತದಲ್ಲಿ ನನಗೆ ಆಗಿದ್ದಂತಹ ಎಲ್ಲಾ ಗಾಯಗಳು ಸಂಪೂರ್ಣವಾಗಿ ವಾಸಿ ಆಗಿವೆ ಎಂದರೆ ಸುಳ್ಳು. ಗೋಕುಲ್ ಕಂಪೆನಿಯಲ್ಲಿ ನಾನು ಸೀನಿಯರ್ ಟೆಕ್ನಿಶಿಯನ್ ಆಗಿ ಕೆಲಸ ಮಾಡುತ್ತಿದ್ದೆನು. ಗೋಕುಲ್ ಕಂಪೆನಿಯಲ್ಲಿ ನಾನು ಕಳೆದ **20** ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ಆ ಸಂಸ್ಥೆಯಲ್ಲಿ ನಾನು ಕೆಲಸ ಮಾಡುತ್ತಿದ್ದೆನು ಎನ್ನುವ ಸಂಬಂಧವಾಗಿ ನನ್ನ ಗುರುತಿನ ಚೀಟಿಯನ್ನು ಬಿಟ್ಟರೆ ನಾನು ಬೇರೆ ಯಾವುದೇ ದಾಖಲೆಯನ್ನು ಹಾಜರುಮಾಡಿರುವುದಿಲ್ಲ.

15) ನನ್ನ ಸಂಬಳದ ಚೀಟಿಯನ್ನು ಹಾಜರುಪಡಿಸಿದ್ದೇನೆ.

ನಾನು ನನ್ನ ಸಂಬಳದ ಚೀಟಿಯನ್ನು ಹಾಜರುಪಡಿಸಿಲ್ಲ ಮತ್ತು ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು.

16) ನಾನು ಈಗ ಗೋಕುಲ್ ಕಂಪೆನಿಯಲ್ಲಿ ಕೆಲಸ ಮಾಡುತ್ತಿಲ್ಲ. ಸದರಿ ಕಂಪೆನಿಯವರು ನನ್ನನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ. ನನ್ನನ್ನು ಕೆಲಸದಿಂದ ತೆಗೆದು ಹಾಕಿದ್ದಾರೆ ಎನ್ನುವ ಬಗ್ಗೆ ದಾಖಲೆ ಇದೆ ಮತ್ತು ಅದನ್ನು ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ಸಂಬಳದ ಹಣದಲ್ಲಿ ಸ್ವಲ್ಪ ಹಣವನ್ನು ವೈದ್ಯಕೀಯ ಸೌಲಭ್ಯ ಎಂಬ ಅಡಿಯಲ್ಲಿ ಕಡಿತ ಮಾಡುತ್ತಿದ್ದರು. ಅಪಘಾತದ ನಂತರ ನಮ್ಮ ವೈದ್ಯಕೀಯ ಹಣ ಮರು ಪಾವತಿ ಸೌಲಭ್ಯದ ಅಡಿಯಲ್ಲಿ **84** ಸಾವಿರ ರೂಪಾಯಿಗಳು ನನಗೆ ಬಂದಿದೆ ಮತ್ತು ಆ ಬಗ್ಗೆ ದಾಖಲೆ ಇದೆ. ಈ ಸಂಬಂಧವಾಗಿ ಗೋಕುಲ್ ಕಂಪೆನಿಯ ಅಧಿಕಾರಿಗಳನ್ನು ವಿಚಾರಣೆ ಮಾಡಲು ನನಗೆ ತೊಂದರೆ ಇರವುದಿಲ್ಲ.

17) ನಿ.ಪಿ.**8** ದಾಖಲೆಯಲ್ಲಿ ಎಷ್ಟು ಹಣವನ್ನು ತೋರಿಸಲಾಗಿದೆಯೋ ಅಷ್ಟು ಹಣವನ್ನು ಮಾತ್ರ ನನ್ನ ಚಿಕಿತ್ಸೆಗಾಗಿ ನಾನು ಖರ್ಚು ಮಾಡಿದ್ದೇನೆ ಎಂದರೆ ಸುಳ್ಳು.

18) ನನ್ನ ಚಿಕಿತ್ಸೆಗಾಗಿ ನಾನು ಎಷ್ಟು ಹಣವನ್ನು ಖರ್ಚು

ಮಾಡಿದ್ದೇನೋ ಆ ಎಲ್ಲಾ ಹಣವನ್ನು **reimbursement** ಪಡೆದುಕೊಂಡಿದ್ದೇನೆ ಮತ್ತು ನನಗೆ ಒಂದು ತಿಂಗಳಿಗೆ **35** ಸಾವಿರ ರೂಪಾಯಿಗಳು ಸಂಬಳ ಬರುತ್ತಿಲ್ಲ ಮತ್ತು ಕೇವಲ ನನ್ನ ಅನುಕೂಲಕ್ಕಾಗಿ ನಾನು ಈ ಸಂಬಂಧವಾಗಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

19) ನಾನು ಹಾಜರುಪಡಿಸಿರುವಂತಹ ಬ್ಯಾಂಕ್ ಸ್ಟೇಟ್ ಮೆಂಟ್ ಅನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

20) ಬೇರೆ ಕಂಪೆನಿಯಲ್ಲಿ ನನಗೆ ಹೆಚ್ಚಿನ ಸಂಬಳ ಬರುವಂತಹ ಸಾಧ್ಯತೆ ಇತ್ತು ಮತ್ತು ಆ ಕಾರಣದಿಂದ ನಾನೇ ಸ್ವಯಂ ಪ್ರೇರಿತನಾಗಿ ಗೋಕುಲ್ ಕಂಪೆನಿಯ ಉದ್ಯೋಗವನ್ನು ಬಿಟ್ಟಿದ್ದೇನೆ ಎಂದರೆ ಸುಳ್ಳು.

21) ಅಪಘಾತವು ನನ್ನ ತಪ್ಪಿನಿಂದಲೇ ಆಗಿದೆ ಮತ್ತು ಕೇವಲ ಅಕ್ರಮವಾಗಿ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ಪೋಲಿಸರ ಜೊತೆ ಶಾಮೀಲಾಗಿ ಕಾರಿನ ವಿರುದ್ಧ ಮತ್ತು ಕಾರಿನ ಚಾಲಕನ ವಿರುದ್ಧ ಸುಳ್ಳು ಪ್ರಕರಣವನ್ನು ಮಾಡಿಸಿದ್ದೇನೆ ಎಂದರೆ ಸುಳ್ಳು.

22) ಅಪಘಾತದಲ್ಲಿ ನನಗೆ ಕೇವಲ ಸಣ್ಣ ಪುಟ್ಟ ಗಾಯಗಳು ಮಾತ್ರ ಆಗಿವೆ ಮತ್ತು ನನಗೆ ಯಾವುದೇ ತೀವ್ರವಾದ ಗಾಯಗಳು ಆಗಿರುವುದಿಲ್ಲ ಮತ್ತು ಯಾವುದೇ ದೈಹಿಕ ಅಂಗ ನ್ಯೂನತೆ ಉಂಟಾಗಿರುವುದಿಲ್ಲ ಮತ್ತು ಕೇವಲ ಪರಿಹಾರವನ್ನು ಪಡೆಯುವ ಉದ್ದೇಶಕ್ಕಾಗಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

**<u>ಪಾಟೀ ಸವಾಲು: 1 ನೇ ಎದುರುದಾರರ ಪರವಾಗಿಃ</u>**

1 ನೇ ಎದುರುದಾರರು ಏಕ ಪಕ್ಷೀಯವಾಗಿದ್ದಾರೆ. ಆದ ಕಾರಣದಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರು ವಿಚಾರಣೆಃ ಇಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.